<u>ದಿನಾಂಕಃ 03-11-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಾದ ಶ್ರೀ ಎಸ್.ವಿ.ಎಂ. ವಕೀಲರಿಂದಃ</u>

ರಾಣೇಬೆನ್ನೂರಿನ ಇಂಡಿಯನ್ ಬ್ಯಾಂಕ್ ನಲ್ಲಿ ಈ ಅರ್ಜಿಯ 2 ನೇ ಅರ್ಜಿದಾರ ಬಸಪ್ಪ ರವರಿಗೆ ಖಾತೆ ಇದೆ ಎಂದು ತೋರಿಸಲು ಸದರಿ ಬ್ಯಾಂಕ್ ನ ಮೂಲ ಪಾಸ್ ಬುಕ್ ನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-22 ಎಂದು ಗುರುತಿಸಲಾಯಿತು .

ಹರಪನಹಳ್ಳಿ ತಾಲ್ಲೂಕಿನ ಶಿಂಗ್ರಿಹಳ್ಳಿ ಗ್ರಾಮದ ಕೆ.ವಿ.ಜಿ ಬ್ಯಾಂಕ್ ನಲ್ಲಿ ಈ ಅರ್ಜಿಯ 3 ನೇ ಅರ್ಜಿದಾರಳಾದ ರತ್ನಮ್ಮ ನನ್ನ ಮಗಳಿಗೆ ಖಾತೆ ಇದೆ ಎಂದು ತೋರಿಸಲು ಸದರಿ ಬ್ಯಾಂಕ್ ನ ಮೂಲ ಪಾಸ್ ಬುಕ್ ನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-23 ಎಂದು ಗುರುತಿಸಲಾಯಿತು .

ದಾವಣಗೆರೆ ತಾಲ್ಲೂಕಿನ ಆನಗೊಡ ಗ್ರಾಮದ ಬ್ಯಾಂಕ್ ಆಫ್ ಬರೋಡಾ ದಲ್ಲಿ ಈ ಅರ್ಜಿಯ 4 ನೇ ಅರ್ಜಿದಾರಳಾದ ಹೊನ್ನಮ್ಮ

ನನ್ನ ಮಗಳಿಗೆ ಖಾತೆ ಇದೆ ಎಂದು ತೋರಿಸಲು ಸದರಿ ಬ್ಯಾಂಕ್ ನ ಪಾಸ್ ಬುಕ್ ನ ನೋಟರಾಜ್ಞ ಪ್ರತಿ (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ)ಯನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-24 ಎಂದು ಗುರುತಿಸಲಾಯಿತು .

ರಾಣೇಬೆನ್ನೂರಿನ ಕೆ.ವಿ.ಜಿ ಬ್ಯಾಂಕ್ ನಲ್ಲಿ ಈ ಅರ್ಜಿಯ 5 ನೇ ಅರ್ಜಿದಾರನನಾದ ಕರಬಸಪ್ಪ ನನ್ನ ಮಗನಿಗೆ ಖಾತೆ ಇದೆ ಎಂದು ತೋರಿಸಲು ಸದರಿ ಬ್ಯಾಂಕ್ ನ ಪಾಸ್ ಬುಕ್ ನ ನೋಟರಾಜ್ಞ ಪ್ರತಿ (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ)ಯನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-25 ಎಂದು ಗುರುತಿಸಲಾಯಿತು.

ಹರಿಹರದ ಕರ್ನಾಟಕ ಬ್ಯಾಂಕ್ ಲಿಮಿಟೆಡ್ ನಲ್ಲಿ ಈ ಅರ್ಜಿಯ 6 ನೇ ಅರ್ಜಿದಾರಳಾದ ದ್ಯಾಮವ್ವ ನನ್ನ ಮಗಳಿಗೆ ಖಾತೆ ಇದೆ ಎಂದು ತೋರಿಸಲು ಸದರಿ ಬ್ಯಾಂಕ್ ನ ಪಾಸ್ ಬುಕ್ ನ ನೋಟರಾಜ್ಞ ಪ್ರತಿ (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ)ಯನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-26 ಎಂದು ಗುರುತಿಸಲಾಯಿತು.

ದಿಃ 09-12-2021 ರಂದು ನನ್ನ ಮಗನಾದ ಮಂಜುನಾಥ

ಮರಣ ಹೊಂದಿದ್ದಾರೆ ಎಂದು ತೋರಿಸಲು ಸದರಿಯವರ ಮರಣ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದೇನೆ ಅದನ್ನು ನಿಪಿ-27 ಎಂದು ಗುರುತಿಸಲಾಯಿತು.

ರಾಣೇಬೆನ್ನೂರಿನ ಉಪ-ತಹಶೀಲ್ದಾರ ರವರು ನೀಡಿರುವ ನಮ್ಮ ಕುಟುಂಬದ ವಂಶವೃಕ್ಷ ದೃಢಿಕರಣ ಪತ್ರವನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-28 ಎಂದು ಗುರುತಿಸಲಾಯಿತು.

ಮಾಗೋಡದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಧಾನ ಗುರುಗಳು ನೀಡಿರುವ ಮೃತ ನನ್ನ ಮಗ ಮಂಜಪ್ಪ ಬಸಪ್ಪ ಮರಡಿಗನವರ ರವರ ಜಾತಿ ಹಾಗು ಜನ್ಮ ದಿನಾಂಕ ದೃಢಿಕರಣ ಪತ್ರವನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-29 ಎಂದು ಗುರುತಿಸಲಾಯಿತು.

ಅರ್ಜಿಯಲ್ಲಿ ಕೋರಿ ಕೊಂಡಂತೆ ಆದೇಶ ಆಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ .

**ಪಾಟೀ ಸವಾಲುಃ** 1 ನೇ ಎದುರುದಾರರ ಪರ ವಕೀಲರಾದ ಶ್ರೀ ವಿ.ಆರ್.ಕೆ ವಕೀಲರನ್ನು ಪದೇ-ಪದೇ ಕೂಗಿ ಕರೆಯಿಸಲಾಗಿ, ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲಾ ಎಂದು

ತೆಗೆದುಕೊಳ್ಳಲಾಯಿತು.

**<u>ಪಾಟೀ ಸವಾಲುಃ</u>** 2 ನೇ ಎದುರುದಾರರ ಪರ ವಕೀಲರಾದ ಶ್ರೀ ಎಂ.ಸಿ.ಎಸ್. ವಕೀಲರು ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.